# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

ಸಂ:ಕರಾಸಾ/ತುವಿ/ಸಂ/ವಾ/ಹ&ಟೆಂ/3490/2018-19 ದಿನಾಂಕ:-15-02-2019

## ಸಂಧಾನ ಪ್ರಕಟಣೆ ಸಂಖ್ಯೆ-06/2018-19

ವಿಷಯ:- ಕರಾರಸಾ.ನಿಗಮ ತುಮಕೂರು ವಿಭಾಗದಲ್ಲಿ ಖಾಲಿಯಿರುವ / ಹೊಸ ವಾಣಿಜ್ಯ ಮಳಿಗೆಗಳಿಗೆ ಸಂಧಾನ ಪ್ರಕಟಣೆಯನ್ನು ಹೊರಡಿಸಿರುವ ಬಗ್ಗೆ.

ಉಲ್ಲೇಖ:- ಸಾ.ಸ್ಥಾ.ಆ. ಸಂಖ್ಯೆ- 787/2017 & 794/2018 (ಇ-ಹ/ಟೆಂ) ದಿನಾಂಕ:-26-07-2017

*****000*****

ಕ.ರಾ.ರ.ಸಾ.ನಿಗಮ ತುಮಕೂರು ವಿಭಾಗಕ್ಕೆ ಸೇರಿದ ಈ ಕೆಳಗಿನ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ಮತ್ತು ಹೊಸ ವಾಣಿಜ್ಯ ಮಳಿಗೆಗಳನ್ನು ಪಡೆಯಲು ಪ್ರತಿ ವರ್ಷ ಶೇ.10% ರಷ್ಟು ಪರವಾನಗಿ ಶುಲ್ಕದ ಹೆಚ್ಚಳದೊಂದಿಗೆ **ಶಾಶ್ವತ ಮಳಿಗೆಗೆ 05 ವರ್ಷ, ತೆರೆದ ಸ್ಥಳಕ್ಕೆ 03 ವರ್ಷ** ಮತ್ತು **ಡಾರಮೆಂಟರಿ ಮತ್ತು ಕಛೇರಿ ಉಪಯೋಗದ ಮಳಿಗೆಗೆ 10 ವರ್ಷಗಳ ಅವಧಿಗೆ** ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-787/2017 & 794/2018 ರಂತೆ **"ಸಂಧಾನ"** ಪ್ರಕ್ರಿಯೆ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಚೆಯುಳ್ಳವರು ದಿನಾಂಕ:-18-02-2019 ರಿಂದ ದಿ:-09-03-2019 ರ 13-00 ಗಂಟೆ ವರೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಮತ್ತು ತಾವು ಅರ್ಜಿ ಸಲ್ಲಿಸಲು ಇಚ್ಚಿಸಿರುವ ಮಳಿಗೆಗಳಿಗೆ ಅವುಗಳ ಮುಂದೆ ಸೂಚಿಸಿರುವ ಇ.ಎಂ.ಡಿ ಮೊತ್ತ ಮತ್ತು ಅರ್ಜಿ ಶುಲ್ಕವನ್ನು **"ವಿಭಾಗೀಯ ನಿಯಂತ್ರಣಾಧಿಕಾರಿ ಕರಾರಸಾನಿಗಮ ತುಮಕೂರು ವಿಭಾಗ"** ರವರ ಹೆಸರಿನಲ್ಲಿ ಡಿ.ಡಿಯನ್ನು ಪಡೆದು ಲಿಖಿತ ಅರ್ಜಿಯೊಂದಿಗೆ ದಿನಾಂಕ:-11-03-2019 17-00 ಗಂಟೆ ರೊಳಗಾಗಿ ಈ ಕಛೇರಿಗೆ ಸಲ್ಲಿಸುವುದು. ಹಾಗೂ ದಿನಾಂಕ:-12-03-2019 ರಂದು ಬೆಳಿಗ್ಗೆ 11-00 ಗಂಟೆಗೆ ಸಂಧಾನ ಪ್ರಕ್ರಿಯೆಗೆ ವಿಭಾಗೀಯ ಕಛೇರಿಯಲ್ಲಿ ಹಾಜರಾಗುವುದು. ಮಳಿಗೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಗಳ ಹೆಸರು | ವಿಸ್ತೀರ್ಣ ಚ.ಅಡಿ/ ಚ.ಮೀ | ಮಳಿಗೆಯ ಮಾದರಿ | ಅವಧಿ | ಮಾಸಿಕ ಮಿತವ್ಯಯ ಶುಲ್ಕ ರೂ. ಗಳಲ್ಲಿ | ಇ.ಎಂ.ಡಿ ಮೊತ್ತ ರೂ.ಗಳಲ್ಲಿ | ಅರ್ಜಿ ಶುಲ್ಕ ರೂ. ಗಳಲ್ಲಿ | ಮೀಸಲಾತಿ |
|---|---|---|---|---|---|---|---|---|---|
| 1 | ತುಮಕೂರು | ಜನರಲ್ ಮಳಿಗೆ ಸಂಖ್ಯೆ-3 | 253.12 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 31212/- | 93636/- | 368/- | ಸಾಮಾನ್ಯ |
| 2 | ತುಮಕೂರು | ಜನರಲ್ ಮಳಿಗೆ ಸಂಖ್ಯೆ-4 | 253.12 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 43681/- | 131043/- | 515/- | ಸಾಮಾನ್ಯ |
| 3 | ತುಮಕೂರು | ಜನರಲ್ ಮಳಿಗೆ ಸಂಖ್ಯೆ-6 | 253.12 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 30856/ | 92568/- | 310/- | ಸಾಮಾನ್ಯ |
| 4 | ತುಮಕೂರು | ಡಾರಮೆಂಟರಿ/ಜನರಲ್ ಮಳಿಗೆ ಸಂಖ್ಯೆ-8 | 1752.37 ಚ.ಅ | ಶಾಶ್ವತ ಕಟ್ಟಡ | ಹತ್ತು ವರ್ಷ | 119900/- | 359700/- | 1415/- | ಸಾಮಾನ್ಯ |
| 5 | ತುಮಕೂರು | ಜನರಲ್ ಮಳಿಗೆ ಸಂ-12 | 241.50 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 73699/- | 221097/- | 870/- | ಸಾಮಾನ್ಯ |
| 6 | ತುಮಕೂರು | ಜನರಲ್ ಮಳಿಗೆ ಸಂ-44 | 10X10=100 ಚ.ಅ | ತೆರೆದ ಸ್ಥಳ | ಮೂರು ವರ್ಷ | 24000/- | 72000/- | 283/- | ಸಾಮಾನ್ಯ |
| 7 | ಗುಬ್ಬಿ | ಜನರಲ್ ಮಳಿಗೆ ಸಂ-07 | 84.71 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 12900/- | 38700/- | 152/- | ಪರಿಶಿಷ್ಟ ಜಾತಿ |
| 8 | ನಿಟ್ಟೂರು | ಜನರಲ್ ಮಳಿಗೆ ಸಂ-04 | 100 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 18150/- | 54450/- | 214/- | ಸಾಮಾನ್ಯ |
| 9 | ಕೊರಟಗೆರೆ | ಉಪಹಾರ ಗೃಹ/ ಮಳಿಗೆ | 114.8 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 30250/- | 90750/- | 357/- | ಸಾಮಾನ್ಯ |
| 10 | ದಾಬಸಪೇಟೆ | ಜನರಲ್ ಮಳಿಗೆ ಸಂಖ್ಯೆ-1 | 241.58 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 18400/- | 55200/- | 217/- | ಸಾಮಾನ್ಯ |
| 11 | ಕುಣಿಗಲ್ | ಜನರಲ್ ಮಳಿಗೆ ಸಂ-03 | 135.08 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 6255/- | 18765/- | 118/- | ಸಾಮಾನ್ಯ |

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

| | | | | | | | | | |
|---|---|---|---|---|---|---|---|---|---|
| 12 | ಕುಣಿಗಲ್ | ಜನರಲ್ ಮಳಿಗೆ ಸಂ–05 | 135.08 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 6958/– | 20874/– | 118/– | ಸಾಮಾನ್ಯ |
| 13 | ಅಮೃತೂರು | ಜನರಲ್ ಮಳಿಗೆ ಸಂಖ್ಯೆ–2 | 140.90 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 1903/– | 5709/– | 118/– | ಸಾಮಾನ್ಯ |
| 14 | ಹುಲಿಯೂರು ದುರ್ಗ | ಉಪಹಾರಗೃಹ ಕೊಠಡಿ (ಹೊಸದು) | 565.00 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 15451/– | 46353/– | 182/– | ಸಾಮಾನ್ಯ |
| 15 | ತಿಪಟೂರು | ಮೊದಲನೆ ಮಹಡಿಯ ಹಾಲ್ ಮಳಿಗೆ–4 | 4290 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 27600/– | 82800/– | 326/– | ಸಾಮಾನ್ಯ |
| 16 | ನೊಣವಿನಕೆರೆ | ಜನರಲ್ ಮಳಿಗೆ | 11.90 ಚ.ಮೀ | ಶಾಶ್ವತ ಕಟ್ಟಡ | ಐದು ವರ್ಷ | 3035/– | 9105/– | 118/– | ಸಾಮಾನ್ಯ |
| 17 | ನೊಣವಿನಕೆರೆ | ಉಪಹಾರಗೃಹ ಕೊಠಡಿ/ ಮಳಿಗೆ | 57.00 ಚ.ಮೀ | ಶಾಶ್ವತ ಕಟ್ಟಡ | ಐದು ವರ್ಷ | 14540/– | 43620/– | 172/– | ಸಾಮಾನ್ಯ |
| 18 | ತುರುವೇಕೆರೆ | ಜನರಲ್ ಮಳಿಗೆ ಸಂಖ್ಯೆ–3 | 221.74 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 2562/– | 7686/– | 118/– | ಸಾಮಾನ್ಯ |
| 19 | ತುರುವೇಕೆರೆ | ಜನರಲ್ ಮಳಿಗೆ ಸಂಖ್ಯೆ–04 | 210.65 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 2178/– | 6534/– | 118/– | ಪರಿಶಿಷ್ಟ ಪಂಗಡ |
| 20 | ತುರುವೇಕೆರೆ | ಜನರಲ್ ಮಳಿಗೆ ಸಂಖ್ಯೆ–07 | 344.44 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 3388/– | 10164/– | 118/– | ಸಾಮಾನ್ಯ |
| 21 | ಮಧುಗಿರಿ | ಸೈಕಲ್/ ಸ್ಕೂಟರ್(ದ್ವಿಚಕ್ರ) ನಿಲ್ದಾಣ (ಹೊಸದು)–7 | 5000.00 ಚ.ಅ | ತೆರೆದ ಸ್ಥಳ | ಮೂರು ವರ್ಷ | 12500/– | 37500/– | 148/– | ಸಾಮಾನ್ಯ |
| 22 | ಸಿ. ಎಸ್. ಪುರ | ಉಪಹಾರಗೃಹ ಕೊಠಡಿ/ ಮಳಿಗೆ ಸಂ–3 (ಹೊಸದು) | 565.00 ಚ.ಅ | ಶಾಶ್ವತ ಕಟ್ಟಡ | ಐದು ವರ್ಷ | 5600/– | 16800/– | 118/– | ಸಾಮಾನ್ಯ |

**ಸೂಚನೆಗಳು :–**

1. ಇ–ಟೆಂಡರ್/ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ/ಅರ್ಜಿ ಸಲ್ಲಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ಮೊಬೈಲ್/ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.
2. ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಜಿದಾರರು ವಾಣಿಜ್ಯ ಮಳಿಗೆಗಳ ಮುಂದೆ ಸೂಚಿಸಿರುವ ಅರ್ಜಿ ಶುಲ್ಕವನ್ನು"**ವಿಭಾಗೀಯ ನಿಯಂತ್ರಣಾಧಿಕಾರಿ, ಕರಾರಸಾ.ನಿಗಮ, ತುಮಕೂರು ವಿಭಾಗ**" ರವರ ಹೆಸರಿನಲ್ಲಿ ಡಿಡಿ ಮೂಲಕ ಪಡೆದುಕೊಂಡು ವಿಭಾಗೀಯ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು. ತಪ್ಪಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.
3. ಅರ್ಜಿ ಸಲ್ಲಿಸುವ ಅರ್ಜಿದಾರರು ವಿಳಾಸ ದೃಢೀಕರಣ ಮೂಲಪ್ರತಿಯನ್ನು ಸಲ್ಲಿಸಬೇಕು.
4. ನಿಗದಿಪಡಿಸಿದ ಮೀಸಲಾತಿಯ ಪ್ರಮಾಣಪತ್ರವನ್ನು ಬಿಟ್ಟು ಬೇರೆ ಮೀಸಲಾತಿಯ ಪ್ರಮಾಣಪತ್ರದ ದಾಖಲಾತಿ ಮಾಡಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ "ಟೆಂಡರ್/ ಸಂಧಾನಗಳಲ್ಲಿ ಪಾವತಿಸಿದ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5. ವಿಭಾಗೀಯ ಕಛೇರಿ ಬ್ಯಾಂಕ್ ಅಂಕೌಂಟ್ ಸಂಖ್ಯೆ–54040230117 D.C.KSRTC.TUMKUR DIVISION. ಮತ್ತು ಐಎಫ್ಐಸಿ ಕೋಡ್ ಸಂಖ್ಯೆ– SBIN0040092 ಹಾಗೂ ವಿಭಾಗದ ಜಿಎಸ್ಟಿ ಸಂಖ್ಯೆ–29AAACV6497R2Z4 ಇದ್ದು, ಪರವಾನಗಿದಾರರು ಆರ್.ಟಿ.ಜಿ.ಎಸ್ (RTGS)/ ಎನ್.ಇ.ಎಫ್.ಟಿ (NEFT) ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಗಿದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಭಾರತೀಯ ರಿಜರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯಲ್ಲಿ ನಗದು ರೂಪದಲ್ಲಿ ಸ್ವೀಕರಿಸುವುದು.
6. ಆಯ್ಕೆ ಆದ ಹೆಚ್–1 ಅರ್ಜಿದಾರರು ಭದ್ರತಾ ಠೇವಣಿ ಪಾವತಿಸಿ ಕರಾರು ಒಪ್ಪಂದವನ್ನು ಮಾಡಿಕೊಳ್ಳದಿದ್ದರೆ ಅಂತವರ ಆಯ್ಕೆಯನ್ನು ತಿರಸ್ಕರಿಸಿ ಹರಾಜು/ ಟೆಂಡರ್/ ಸಂಧಾನಗಳಲ್ಲಿ "ಪಾವತಿಸಿದ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಎರಡು ವರ್ಷ ಕಾಲ ಸಂಸ್ಥೆಯ ಯಾವುದೇ ಇ–ಟೆಂಡರ್/ ಸಂಧಾನಗಳಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು".
7. **ಇ–ಟೆಂಡರ್/ಸಂಧಾನದಲ್ಲಿ ಆಯ್ಕೆಯಾದ ಅರ್ಜಿದಾರರು ಆಯ್ಕೆಯಾದ ಒಂದು ವಾರದೊಳಗೆ ಮಳಿಗೆಯ ಭದ್ರತಾ ಠೇವಣಿ ಮತ್ತು ಮುಂಗಡ ಶುಲ್ಕ ಪಾವತಿಸಿ ಕರಾರು ಒಪ್ಪಂದವನ್ನು ಮಾಡಿಕೊಂಡು ವ್ಯವಹಾರ/ವ್ಯಾಪಾರವನ್ನು ಪ್ರಾರಂಭಿಸದೇ ಇದ್ದ ಪಕ್ಷದಲ್ಲಿ ಅವರ ಆಯ್ಕೆಯನ್ನು ರದ್ದುಪಡಿಸಿ ಇಎಂಡಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

# <u>ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು</u>

8. ಇ–ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷೆನ್ 32ಎ (ಎ) (111) ರಲ್ಲಿ ಪರಿಷ್ಕ್ರತ ಸ್ಟಾಂಪ್ ಅಕ್ಟ್ ನಂ: 8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ಕೂಡಲೇ ವ್ಯವಹಾರ ಪ್ರಾರಂಭಿಸಬೇಕಾಗಿರುತ್ತದೆ.
9. ಕೆಳಕಂಡಂತೆ ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ./ಆರ್.ಟಿ.ಜಿ.ಎಸ್ (RTGS)/ ಎನ್.ಇ.ಎಫ್.ಟಿ (NEFT) ಮೂಲಕ ಪಾವತಿಸಿಕೊಳ್ಳುವುದು. ಆಯ್ಕೆ ಆದ ಪರವಾನಗಿದಾರರು ತಾವು ಸಲ್ಲಿಸಿರುವ ಇಎಂಡಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು ಟೆಂಡರ್‌ನಲ್ಲಿ ಸೂಚಿಸಿರುವ ಪರವಾನಿಗೆ ಶುಲ್ಕದ ತಿಂಗಳ ಹಣವನ್ನು ಭದ್ರತಾ ಠೇವಣಿಯಾಗಿ ಮತ್ತು ಒಂದು ತಿಂಗಳ ಮುಂಗಡ **ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST) ಗಳನ್ನು** ಇ–ಹರಾಜು/ಟೆಂಡರ್‌ನಲ್ಲಿ ಆಯ್ಕೆಯಾದ ಕೂಡಲೇ ಡಿ.ಡಿ./ಆರ್‌ಟಿಜಿಎಸ್/ಎನ್‌ಇಎಫ್‌ಟಿ ರೂಪದಲ್ಲಿ **"<u>ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ತುಮಕೂರು ವಿಭಾಗ</u>"** ಇವರ ಹೆಸರಿನಲ್ಲಿ ಪಾವತಿಸುವುದು. ಮೇಲೆ ತಿಳಿಸಿದ ಭದ್ರತಾ ಠೇವಣಿ ಈ ಕೆಳಗಿನಂತೆ ಪಾವತಿಸುವುದು.

| ಕ್ರ.ಸಂ. | ಪರವಾನಗಿ ಅವಧಿ | ಒಟ್ಟು ಪಾವತಿಸಿಕೊಳ್ಳಬೇಕಿರುವ ಭದ್ರತಾ ಠೇವಣಿ |
|---|---|---|
| 1 | 3 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

10. **ತೆರೆದ ಸ್ಥಳಕ್ಕೆ ಮೂರು (03) ವರ್ಷ, ಸ್ಥಿರ ಮಳಿಗೆಗಳಿಗೆ ಐದು (05) ವರ್ಷ ಹಾಗೂ ಡಾರಮೆಂಟರಿ ಮತ್ತು ಕಛೇರಿ ಉಪಯೋಗದ ಮಳಿಗೆಗೆ <u>10</u> ವರ್ಷಗಳ ಅವಧಿಗೆ ಆಯ್ಕೆಯಾದ ಅರ್ಜಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.**
11. ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ **<u>ಶೇಕಡಾ.18%</u>** ರಷ್ಟು ಸರಕು ಮತ್ತು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
12. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.
13. ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿಯಿರಿಸಿಕೊಂಡಿರುವವರು ಮತ್ತು ಕರಾರು ನಿಯಮ ಉಲ್ಲಂಘಿಸಿ ನಿಗಮದಿಂದ ಕರಾರು ಒಪ್ಪಂದ ರದ್ದಾಗಿರುವವರು ಇ–ಹರಾಜು/ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ ಹಾಗೂ ಅರ್ಜಿ ಸಲ್ಲಿಸಿದಲ್ಲಿ ಇಎಂಡಿ. ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ವಾಣಿಜ್ಯ ಮಳಿಗೆಗಳಲ್ಲಿ/ ಉಪಹಾರಗೃಹ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
15. ಇ– ಟೆಂಡರ್/ಸಂಧಾನ ಪ್ರಕ್ರಿಯೆಗಳಲ್ಲಿ ಮಳಿಗೆಗೆ ಆಯ್ಕೆಯಾದ ಅರ್ಜಿದಾರರು ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ <u>ಸೇಲ್ಸ್</u> ಟ್ಯಾಕ್ಸ್‌ಕ್ಲಿಯರೆನ್ಸ್ ಸರ್ಟಿಫಿಕೇಟ್ ಕಡ್ಡಾಯವಾಗಿ ನೀಡುವುದು.
16. ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.
17. ಅಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ: ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.
18. ಅಯ್ಕೆಗೊಂಡ ಪರವಾನಗಿದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ ಹಣವನ್ನು ಹಿಂತಿರುಗಿಸಲಾಗುವುದು.
19. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು ಮತ್ತು ಸೇವಾ ತೆರಿಗೆಯನ್ನು ಆ ತಿಂಗಳ **07ನೇ** ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.
20. ಉಪಹಾರ ಗೃಹಗಳಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಉಪಹಾರಗೃಹದಲ್ಲಿ ಕಡ್ಡಾಯವಾಗಿ ಅಗ್ನಿ ರಕ್ಷಕ ಉಪಕರಣ ಅಳವಡಿಸುವುದು.
21. ಮಳಿಗೆಗಳಲ್ಲಿ ಟೂರಿಸ್ಟ್/ಟ್ರಾವೆಲ್ ಏಜೆನ್ಸಿ, ಮಧ್ಯ, ಮಾಂಸ, ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ ಮಾರಾಟ ವಸ್ತುಗಳನ್ನು, ಪಟಾಕಿ ಹಾಗೂ ಸ್ಫೋಟಕ ವಸ್ತುಗಳನ್ನು, ವಾಯು ಮಾಲಿನ್ಯ ಮಾಡುವ ವ್ಯಾಪಾರ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆ ಬರುವ ವ್ಯಾಪಾರಗಳಿಗೆ ನಿಷೇಧಿಸಲಾಗಿದೆ.

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

22. **ಸ್ಥಿರ ಮಳಿಗೆಗಳು ಹಾಗೂ ತೆರೆದ ಸ್ಥಳಗಳ ಮಳಿಗೆಗಳನ್ನು ಮಾರ್ಪಾಡು ಮಾಡಲು ನೀಡುವ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಮಳಿಗೆಗಳು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು ಮತ್ತು ಇ-ಟೆಂಡರ್‌ನಲ್ಲಿ ನೀಡಿರುವ/ ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದು.**
23. ಆಯ್ಕೆಗೊಂಡ ಪರವಾನಗಿದಾರರು ಕರ್ನಾಟಕ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ–6/23 (1) ನಿಯಮ 23 (2) ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ಮಾರಾಟ ಮಾಡುವ ವಸ್ತುಗಳ ಮೇಲೆ ತಯಾರಕರು, ನಿರ್ಧಿಷ್ಟ ಪಡೆಸಿದ ಗರಿಷ್ಟ ಬೆಲೆಗೆ ಮಾರಾಟ ಮಾಡಬೇಕಾಗಿರುತ್ತದೆ. ಗರಿಷ್ಟ ಬೆಲೆಯನ್ನು ಅಳಿಸುವುದು/ತಿದ್ದುವುದಾಗಲಿ ಇತ್ಯಾದಿಗಳು ದೂರು ಬಂದಲ್ಲಿ ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು.
24. ಆಯ್ಕೆಗೊಂಡ ಪರವಾನಗಿದಾರರು ನಿಗದಿತ ಸಮಯದೊಳಗೆ ಕರಾರು ಒಪ್ಪಂದ ಮಾಡಿಕೊಂಡು ವ್ಯಾಪಾರ ನಡೆಸದಿದ್ದಲ್ಲಿ ಅವರು ನೀಡಿರುವ ಇಎಂಡಿ ಮೊತ್ತವನ್ನು ಸಂಸ್ಥೆಗೆ ಆಗುವ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
25. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ದರಾಗಿರಬೇಕು.
26. ಸ್ಕೂಟರ್ ಮತ್ತು ಸೈಕಲ್ ನಿಲ್ದಾಣದ ಅವಧಿ ಮೂರು (03) ವರ್ಷದಾಗಿರುತ್ತದೆ. ಆಯ್ಕೆಯಾದ ಪರವಾನಗಿದಾರರು ನಿಗಮವು ನಿಗದಿ ಪಡಿಸಿದ ದರದಂತೆ ಶುಲ್ಕವನ್ನು ಪಡೆಯುವುದು ಹಾಗೂ ದ್ವಿಚಕ್ರ ಪಾರ್ಕಿಂಗ್‌ಗಳಿಗೆ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 206 'ಸಿ' ನ ಪ್ರಕಾರ **<u>ಟಿ.ಸಿ.ಎಸ್</u>** ಮತ್ತು ಪರವಾನಗಿ ಶುಲ್ಕದ ಮೇಲೆ **<u>ಶೇ.18%</u>** ರಷ್ಟು ಸರಕು ಮತ್ತು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಪಾವತಿಸಲು ಬದ್ಧರಾಗಿರಬೇಕು.
27. **<u>ಇ.ಎಂ.ಡಿ. ಮೊತ್ತ</u>:–** ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು (03) ಪಟ್ಟು ಮೊತ್ತವನ್ನು ಇ.ಎಂ.ಡಿ.ಯನ್ನಾಗಿ (Earnest Money Deposit) ನಿಗದಿಪಡಿಸಲಾಗುವುದು.
28. ಇ.ಎಂ.ಡಿ. ಮತ್ತು ಭದ್ರತಾ ಠೇವಣಿ ಮೊತ್ತಗಳನ್ನು ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
29. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಮೊತ್ತವನ್ನು ಪಾವತಿಸಿಕೊಳ್ಳಲಾಗುವುದು.
30. ಪರವಾನಗಿ ಅವಧಿ ಮುಕ್ತಾಯವಾದ ನಂತರ ನಿಗಮಕ್ಕೆ ಪಾವತಿಸಬೇಕಾದ ಬಾಕಿ ಶುಲ್ಕಗಳನ್ನು ಕಡಿತಗೊಳಿಸಿ ಉಳಿದ ಭದ್ರತಾ ಠೇವಣಿಯನ್ನು ಪರವಾನಗಿದಾರರಿಗೆ ಹಿಂತಿರುಗಿಸುವುದು. ಭದ್ರತಾ ಠೇವಣಿ ಹಿಂದಿರುಗಿಸುವುದಕ್ಕೂ ಮೊದಲು ವಿಭಾಗೀಯ ಲೆಕ್ಕಾಧಿಕಾರಿಯವರಿಂದ ವಾಣಿಜ್ಯ ಆದಾಯದ ಪರಿಶೀಲನೆ ದೃಢೀಕರಿಸಿಕೊಂಡು ನಂತರ ಹಿಂದುರುಗಿಸಬೇಕಾದ ಮೊತ್ತ ಹಿಂದುರುಗಿಸಲಾಗುವುದು.
31. **<u>ಪರವಾನಗಿ ಅವಧಿ</u>:–**

| ಕ್ರ. ಸಂ. | ಮಳಿಗೆ ಮಾದರಿ/ಸ್ಥಳ | ಪರವಾನಗಿ ಅವಧಿ |
|---|---|---|
| 1 | ತೆರೆದ ಸ್ಥಳದಲ್ಲಿನ ಮಳಿಗೆಗಳು | 3 ವರ್ಷಗಳು |
| 2 | ಕಟ್ಟಿದ ಮಳಿಗೆಗಳು | 5 ವರ್ಷಗಳು |
| 3 | ಡಾರ್ಮಿಟರಿ / ಲಾಡ್ಜಿಂಗ್ / ಕಛೇರಿ ಉದ್ದೇಶಕ್ಕಾಗಿ / ಮೊಬೈಲ್ ಟವರ್ಸ್ | 10 ವರ್ಷಗಳು |

32. ಬಿಡ್‌ದಾರರು ಮಳಿಗೆಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ / ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
33. ಮೀಸಲಾತಿ ಬಯಸುವ ಬಿಡ್‌ದಾರರು ಮೀಸಲಾತಿಗೆ ಸಂಬಂಧಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಿಸುವ ದಾಖಲೆಗಳನ್ನು ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲ್ಲೂಕು ತಹಶಿಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ಧೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.
34. ಬಿಡ್‌ದಾರರು ಒಂದು ಮಳಿಗೆಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
35. ಒಂದು ವೇಳೆ ಬಿಡ್‌ದಾರರು ಇ–ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದ್ದಲ್ಲಿ, ಇ–ಪೋರ್ಟಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

36. ಬಿಡ್‌ದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಲಾಗುವುದು.
37. ಇ–ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ಮೂಲ ದಾಖಲಾತಿಗಳ ಜೊತೆ ಜೆರಾಕ್ಸ್ ಪ್ರತಿಯನ್ನು **ಇ–ಟೆಂಡರ್ ತೆರೆಯುವ ದಿನಾಂಕ / ಸಮಯದೊಳಗೆ ನಮ್ಮ ಕಛೇರಿಗೆ ಸಲ್ಲಿಸಿದ ಅರ್ಜಿದಾರರನ್ನು ಮಾತ್ರ ಮಳಿಗೆಯ ಪರವಾನಗಿದಾರರ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.**
38. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಮಳಿಗೆಗಳಲ್ಲಿ, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆ / ಜಾಹೀರಾತು ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ–ದೃಢೀಕರಣವನ್ನು ಬಿಡ್‌ದಾರರು ಇ–ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು, ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ / ಕರಾರನ್ನು ರದ್ದುಗೊಳಿಸಲಾಗುವುದು.
39. ಬಿಡ್‌ದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಬೇಕಿರುತ್ತದೆ. ಮ್ಯಾನ್ಯುಯಲ್ ಸಂಧಾನದ ಸಮಯದಲ್ಲಿಯೂ ಬಿಡ್‌ದಾರರು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಿರುತ್ತದೆ.

| **ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ** | **ರೂ.5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ** |
|---|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.)<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ–ದೃಢೀಕರಣ ಪತ್ರವನ್ನು ಸಲ್ಲಿಸಬೇಕು. | ಅ) ಕಂಪನಿ / ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc)<br>ಆ) ಆದಾಯ ತೆರಿಗೆ ತೀರುವಳಿ ಪತ್ರ.<br>ಇ) ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ವಹಿವಾಟು ನಡೆಸಿರುವ ಬಗ್ಗೆ, 02 ವರ್ಷದ ವಾರ್ಷಿಕ ವಹಿವಾಟಿನ ದಾಖಲೆಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಈ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಉ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಊ) ವಹಿವಾಟಿಗೆ ಪೂರಕವಾಗಿ ಕಳೆದ 02 ವರ್ಷದ ಲಾಭ / ನಷ್ಟದ ಲೆಕ್ಕಾಚಾರದ ದಾಖಲೆಗಳು ಮತ್ತು ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಋ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರಪತ್ರವನ್ನು ಸಲ್ಲಿಸಬೇಕು. |

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

40. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಿಸುವ ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲ್ಲೂಕು ತಹಶಿಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ಧೃಡೀಕೃತ ಪ್ರತಿದೊಂದಿಗೆ ಸಲ್ಲಿಸುವುದು ಹಾಗೂ ಆಯ್ಕೆಯಾದ ಅಭ್ಯರ್ಥಿಗಳು ಕರಾರು ಒಪ್ಪಂದ ಮಾಡಿಕೊಳ್ಳುವಾಗ ಎಲ್ಲಾ ಮೂಲ ದಾಖಲಾತಿ ಒದಗಿಸುವುದು.
41. ಅಂಧರು ಮತ್ತು ವಿಕಲಚೇತನರಿಗೆ ಮೀಸಲಿಟ್ಟ ಮಳಿಗೆಗಳನ್ನು, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ–ದೃಢೀಕರಣವನ್ನು ಬಿಡ್‌ದಾರರು ನಿಗದಿತ ದಿನಾಂಕದೊಳಗೆ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ /ಕರಾರನ್ನು ರದ್ದುಗೊಳಿಸುವುದು.
42. ಅಂಗವಿಕಲ ಅರ್ಜಿದಾರರು ಕನಿಷ್ಟ ಶೇ.40 ರಷ್ಟು ಅಂಗವಿಕಲತೆಯನ್ನು ಹೊಂದಿರಬೇಕು. ಸಂಪೂರ್ಣ ಅಂಧ, ಕಿವುಡು ಹಾಗೂ ಮೂಕ ಅಭ್ಯರ್ಥಿಗಳು ಸಹ ಅರ್ಜಿಸಲ್ಲಿಸಬಹುದಾಗಿದೆ. ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಭಾವಚಿತ್ರ ಇರುವ ವಿಕಲಚೇತನತೆಯ ಪ್ರಮಾಣ ಪತ್ರವನ್ನು ಮತ್ತು ವಿಕಲಚೇತನತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಖುದ್ದಾಗಿ ಹಾಜರಿರಬೇಕು.
43. ವಾಣಿಜ್ಯ ಮಳಿಗೆಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆಕ್ಟ್–2010 ರನ್ವಯ ಒಂದು ವರ್ಷ ಮೀರುವ ಮತ್ತು 10 ವರ್ಷ ಮೀರದೆ ಇರುವ ಪರವಾನಗಿ ಅವಧಿಗೆ, ಒಟ್ಟು ಪರವಾನಗಿ ಶುಲ್ಕದ (ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇ.1 ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಭರಿಸಬೇಕಾಗುತ್ತದೆ.
44. ನಿಗಮದ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯವನ್ನು ಕಲ್ಪಿಸಿರುವಂತಹ ಮಳಿಗೆಗಳ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕದ ಶೇ.2 ರಷ್ಟು ಅಥವಾ ಕೊಳವೆ ಬಾವಿಯ ವಿದ್ಯುತ್ ಬಿಲ್ಲಿನ ಶೇ.50 ರಷ್ಟು, ಇದರಲ್ಲಿ ಯಾವುದು ಹೆಚ್ಚಿನದು, ಆ ಮೊತ್ತವನ್ನು ಪಾವತಿಸಬೇಕು.
45. ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.
46. ಒಂದು ವೇಳೆ ನಿಗಮದ ವತಿಯಿಂದ ನೀರಿನ ಸರಬರಾಜು ಮಾಡಲು ಸಾಧ್ಯವಾಗದಿದ್ದಲ್ಲಿ, ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿರುತ್ತದೆ.
47. **ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ:–** ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸುವುದು ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸುವುದು. |

48. ಪರವಾನಗಿದಾರರು ಕೊಳವೆ ಬಾವಿ (Borewell) ಕೊರೆಸಲು ಅನುಮತಿ ಕೋರಿದಲ್ಲಿ, ಸ್ಥಳೀಯ ಸಂಸ್ಥೆಗಳ ನಿಯಮಾವಳಿಗಳು, ವಾಣಿಜ್ಯ ಸ್ಥಳ, ಬಸ್ ನಿಲ್ದಾಣದಲ್ಲಿ ಹಾಲಿ ಇರುವಂತಹ ಬೋರ್‌ವೆಲ್‌ಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ನಿಗಮದ ತೀರ್ಮಾನಕ್ಕೆ ಪರವಾನಗಿದಾರರು ಬದ್ಧರಾಗಿರಬೇಕು.
49. ಪರವಾನಗಿದಾರರು ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.10 ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.
50. ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. ಸದರಿ ಪಟ್ಟಿಯ

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಗಿದಾರರು ಕರಾರಿಗೂ ಮುಂಚಿತವಾಗಿ ನಿಗಮದಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ. ವಿಭಾಗದ ಅಧಿಕಾರಿಗಳು ಅನುಮತಿ ನೀಡುವ ಮುನ್ನ, ಸದರಿ ವಸ್ತುಗಳ ಮಾರಾಟದಿಂದ ಇತರೆ ಮಳಿಗೆಗಳ ವ್ಯವಹಾರಕ್ಕೆ ನಷ್ಟ ಆಗುವುದಿಲ್ಲ, ಎಂಬುದನ್ನು ದೃಢೀಕರಿಸಿಕೊಳ್ಳಬೇಕು.

| **ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು/ ಪದಾರ್ಥಗಳು** | **ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇಧಿಸಿರುವ ವಸ್ತು / ಪದಾರ್ಥಗಳು** |
|---|---|
| ಪುಸ್ತಕ/ ದಿನಪತ್ರಿಕೆ / ನಿಯತಕಾಲಿಕೆಗಳು ಮತ್ತು ಸ್ಟೇಷನರಿ ವಸ್ತುಗಳು, ಮಾರ್ಜಕ / ಸಾಬೂನುಗಳು ಹಣ್ಣು / ಹೂಗಳು, ಜೆರಾಕ್ಸ್, ಪ್ಯಾಕ್ ಆಗಿರುವ ಬಿಸ್ಕೆಟ್ಸ್ / ಜ್ಯೂಸ್, ಬೇಕರಿ ತಿನಿಸುಗಳು, ನೀರಿನ ಬಾಟಲ್, ಮೊಬೈಲ್ ಕರೆನ್ಸಿ, ಸೌಂದರ್ಯವರ್ಧಕಗಳು, ಅಲಂಕಾರಿಕ ವಸ್ತುಗಳು, ಕೊಡುಗೆ ನೀಡುವ ವಸ್ತುಗಳು, ಫ್ಯಾನ್ಸಿ ಸ್ಟೋರ್‌ನಲ್ಲಿ ಮಾರಾಟ ಮಾಡುವ ವಸ್ತುಗಳು,<br>**ಈ ಮಳಿಗೆಗಳಲ್ಲಿ ಗ್ಯಾಸ್ / ಸ್ಟೌವ್ ಬಳಕೆಗೆ ಅವಕಾಶವಿಲ್ಲ.** | ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಹಾಲು ಇತ್ಯಾದಿಗಳು, ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ & ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೇಟ್ ಬುಕಿಂಗ್, ಇತ್ಯಾದಿ ಕಾನೂನುಬಾಹಿರ ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು. |

51. ಸಣ್ಣ ವಿಸ್ತೀರ್ಣದ ಮಳಿಗೆಗಳಿಗೆ, ಅಂದರೆ 200 ಚದರಡಿ ವಿಸ್ತೀರ್ಣದ ಒಳಗಿನ ಮಳಿಗೆಗಳಿಗೆ ಹೆಚ್ಚುವರಿ ಸ್ಥಳಾವಕಾಶ ಅನ್ವಯಿಸುವುದಿಲ್ಲ.
52. ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. ಸದರಿ ಪಟ್ಟಿಯ ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಗಿದಾರರು ಕರಾರಿಗೂ ಮುಂಚಿತವಾಗಿ ನಿಗಮದಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ. ವಿಭಾಗದ ಅಧಿಕಾರಿಗಳು ಅನುಮತಿ ನೀಡುವ ಮುನ್ನ ಸದರಿ ವಸ್ತುಗಳ ಮಾರಾಟದಿಂದ ಇತರೆ ಮಳಿಗೆಗಳ ವ್ಯವಹಾರಕ್ಕೆ ನಷ್ಟ ಆಗುವುದಿಲ್ಲ, ಎಂಬುದನ್ನು ದೃಢೀಕರಿಸಿಕೊಳ್ಳಬೇಕು.
53. **ನಿಗದಿತ ದರದಲ್ಲಿ ಮಾರಾಟ (MRP rate):-** ವಾಣಿಜ್ಯ ಮಳಿಗೆಗಳಲ್ಲಿ ಪರವಾನಗಿದಾರರು ಮಾರಾಟ ಮಾಡುವ ವಸ್ತುಗಳನ್ನು, ಅವುಗಳ ಮೇಲೆ ನಮೂದಿಸಲಾದ ಗರಿಷ್ಠ ಮೊತ್ತಕ್ಕೆ / MRP (Maximum Retail Price) ಮೀರದಂತೆ ಮಾರಾಟ ಮಾಡಬೇಕು. ವಸ್ತುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/-, 2ನೇ ಪ್ರಕರಣಕ್ಕೆ ರೂ.1,000/- ಮತ್ತು 3ನೇ ಪ್ರಕರಣಕ್ಕೆ ರೂ.2,000/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ, ರೂ.2,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
54. **ದ್ವಿಚಕ್ರ / ಕಾರ್ ವಾಹನ ನಿಲುಗಡೆ ಶುಲ್ಕ:-** ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲ್ದಾಣ ಹಾಗೂ ಕಾರು ನಿಲ್ದಾಣದ ವ್ಯವಸ್ಥೆ ಕಲ್ಪಿಸಲಾಗಿದ್ದು, ಪರವಾನಗಿದಾರರು ಈ ಕೆಳಕಂಡಂತೆ ನಿಲುಗಡೆ ಶುಲ್ಕ ವಿಧಿಸಬೇಕಿರುತ್ತದೆ.

**ಇತರೆ ಜಿಲ್ಲಾ ಕೇಂದ್ರ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು:-**

| **ವಾಹನದ ವಿಧ** | **ದರ (ರೂ.ಗಳಲ್ಲಿ)** | | | |
|---|---|---|---|---|
| ಸಮಯ (ಗಂಟೆಗಳಲ್ಲಿ) | 0-1 | 1-4 | 4-24 | 24 ಗಂಟೆಗಳ ಮೇಲ್ಪಟ್ಟು |
| ಸೈಕಲ್ ವಾಹನ | 1 | 3 | 5 | ಪ್ರತಿ ದಿನಕ್ಕೆ ರೂ.10/- |
| ಸ್ಕೂಟರ್/ ದ್ವಿಚಕ್ರ ವಾಹನ | 4 | 6 | 10 | ಪ್ರತಿ ದಿನಕ್ಕೆ ರೂ.20/- |

**ತಾಲ್ಲೂಕು / ಇತರೆ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು:-**

| **ವಾಹನದ ವಿಧ** | **ದರ (ರೂ.ಗಳಲ್ಲಿ)** | | | |
|---|---|---|---|---|
| ಸಮಯ (ಗಂಟೆಗಳಲ್ಲಿ) | 0-1 | 1-4 | 4-24 | 24 ಗಂಟೆಗಳ ಮೇಲ್ಪಟ್ಟು |
| ಸೈಕಲ್ ವಾಹನ | 1 | 2 | 4 | ಪ್ರತಿ ದಿನಕ್ಕೆ ರೂ.8/- |
| ಸ್ಕೂಟರ್ / ದ್ವಿಚಕ್ರ ವಾಹನ | 2 | 4 | 8 | ಪ್ರತಿ ದಿನಕ್ಕೆ ರೂ.16/- |

55. ಸಂಧಾನ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
56. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
57. H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
58. ಪರವಾನಗಿ ಪಡೆದ ಅವಧಿಯಿಂದ ಒಂದು ವರ್ಷದ ಒಳಗೆ ಪರವಾನಗಿದಾರರು, 6 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.
59. ಒಂದು ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ, 4 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.
60. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ ಎರಡು (02) ತಿಂಗಳು ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ, ಅಂತಹ ಮಳಿಗೆಗಳ ಪರವಾನಗಿಯನ್ನು ನಿಗಮದ ವತಿಯಿಂದ ರದ್ದುಪಡಿಸಿ, ಪರವಾನಗಿದಾರರು ನಿಗಮದಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
61. ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
62. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
63. ಒಂದು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಒಂದು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
64. ಪರವಾನಗಿ ಪಡೆದ ಪರವಾನಗಿದಾರರೇ ಮಳಿಗೆಯನ್ನು ನಡೆಸುವುದು. ಮಳಿಗೆಗಳನ್ನು ಉಪ ಪರವಾನಗಿಗೆ ನೀಡಲು ಅವಕಾಶವಿರುವುದಿಲ್ಲ.
65. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಮಳಿಗೆಯನ್ನು ಉಪ–ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಲಾಗುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.
66. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
67. ಮುಷ್ಕರ / ಬಂದ್ ಅವಧಿಯಲ್ಲಿ ಮಳಿಗೆಯ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.
68. ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು.
69. ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು. ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಪಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

70. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
71. .ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಬೇಕು.
72. ನಿಗಮದ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವ ವ್ಯವಹಾರವನ್ನು, ನಿಗಮದ ವತಿಯಿಂದ ನಿಷೇದಿಸಲ್ಪಟ್ಟ, ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮತ್ತು ಕಾನೂನುಬಾಹಿರ ವಸ್ತುಗಳ ಮಾರಾಟವನ್ನು ಮಳಿಗೆಗಳಲ್ಲಿ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳ ಮಾರಾಟ ಕಂಡುಬಂದಲ್ಲಿ, ಪರವಾನಗಿಯನ್ನು ರದ್ದುಪಡಿಸಲಾಗುವುದು ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು.
73. ಆಯ್ಕೆಗೊಂಡ ಪರವಾನಗಿದಾರರು ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ / ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ನಿಗಮವು ಜವಾಬ್ದಾರಿಯಾಗಿರುವುದಿಲ್ಲ.
74. ಲಾಡ್ಜಿಂಗ್ & ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ, ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್/ ಗ್ಯಾಸ್ ಬಳಕೆಯನ್ನು ನಿಷೇಧಿಸಲಾಗಿದೆ.
75. ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.
76. ಯಾವುದೇ ಕಾರಣ ನೀಡದೇ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
77. ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್ / ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

**ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST) ಪಾವತಿ:-**

1. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು ಪಾವತಿಸುವುದು ವಿಳಂಭವಾದಲ್ಲಿ ಪ್ರಸ್ತುತ ಬಡ್ಡಿ ಶೇ.18%, ನ್ನು ನಿಗಮಕ್ಕೆ ಪಾವತಿಸಬೇಕಾಗುತ್ತದೆ.

2. ಪರವಾನಗಿದಾರರಿಗೆ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 3ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಪಡೆಯುವುದು.

3. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18% ರಷ್ಟು ಬಡ್ಡಿಯನ್ನು ಕನಿಷ್ಠ 100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸುವುದು.

4. ಪರವಾನಗಿದಾರರು ಜಿ.ಎಸ್.ಟಿ (GST) ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ನಮಗೆ ನೀಡುವುದು.

5. ಆಯ್ಕೆಯಾದ ಪರವಾನಗಿದಾರರು ಸರಕು & ಸೇವಾ ತೆರಿಗೆ (ಜಿಎಸ್‌ಟಿ) ಯನ್ನು ಸರ್ಕಾರಕ್ಕೆ ಪಾವತಿಸುವ ಸಂಬಂಧ ನಮ್ಮ ಲೆಕ್ಕಪತ್ರ ಶಾಖೆಯಿಂದ ನೀಡಲಾಗುವ ಮಾರ್ಗಸೂಚಿಗಳನ್ನು ಅನುಸರಿಸುವುದು.

6. ಪರವಾನಗಿದಾರರು ಪ್ರತಿ ತಿಂಗಳು ಪಾವತಿಸುವ ಮೊತ್ತವನ್ನು ಕ್ರಮವಾಗಿ ಬಾಕಿಯಿರುವ ಸರಕು & ಸೇವಾ ತೆರಿಗೆ, ವಿದ್ಯುಚ್ಛಕ್ತಿ ಬಳಕೆ ಶುಲ್ಕ, ಬಾಕಿ ಪರವಾನಗಿ ಶುಲ್ಕದ ಬಡ್ಡಿ, ಬಾಕಿ ಪರವಾನಗಿ ಶುಲ್ಕಗಳಿಗೆ ಸರಿದೂಗಿಸಿಕೊಂಡ ನಂತರ ಪ್ರಸಕ್ತ ತಿಂಗಳ ಸರಕು & ಸೇವಾ ಶುಲ್ಕ ಮತ್ತು ಮಾಸಿಕ ಪರವಾನಗಿ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.

7. ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುವುದು.

**ವಿಭಾಗೀಯ ನಿಯಂತ್ರಣಾಧಿಕಾರಿ**
**ತುಮಕೂರು ವಿಭಾಗ, ತುಮಕೂರು.**

# <u>ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು</u>

**ಪ್ರತಿಯನ್ನು ಗೌರವಪೂರ್ವಕವಾಗಿ:**

1) ನಿರ್ದೇಶಕರು (ಭ&ಜಾ), ಕರಾರಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ನಿರ್ದೇಶಕರು (ಕಾರ್ಯ), ಕರಾರಸಾ.ನಿಗಮ, ಕೇಂದ್ರಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), ಕರಾರಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ವ್ಯವಸ್ಥಾಪಕರ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ/ ವಾಕರಸಾಸಂಸ್ಥೆ/ ಈಕರಸಾಸಂಸ್ಥೆ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾ.ನಿಗಮ, ವಾಕರಸಾಸಂಸ್ಥೆ ಮತ್ತು ಈಕರಸಾಸಂಸ್ಥೆ. ರವರ ಮಾಹಿತಿಗಾಗಿ ಮತ್ತು ಹೆಚ್ಚಿನ ಪ್ರತಿಯನ್ನು ಬಸ್ ನಿಲ್ದಾಣಗಳಲ್ಲಿ ಪ್ರದರ್ಶಿಸಲು ಕೋರಲಾಗಿದೆ.

<u>**ಪ್ರತಿಯನ್ನು:-**</u>

1) ಘಟಕ ವ್ಯವಸ್ಥಾಪಕರು, ತುಮಕೂರು-1/ ತುಮಕೂರು-2/ ಕುಣಿಗಲ್/ ತುರುವೇಕೆರೆ/ ತಿಪಟೂರು ಮತ್ತು ಮಧುಗಿರಿ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
2) ವಿಭಾಗೀಯ ಸಂಚಲನಾಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಸಹಾಯಕ ಲೆಕ್ಕಾಧಿಕಾರಿ/ ಸಹಾಯಕ ಕಾನೂನು ಅಧಿಕಾರಿ, ತುಮಕೂರು ವಿಭಾಗರವರುಗಳು <u>**ದಿನಾಂಕ:-**12-03-2019</u> ರಂದು ಇ-ಹರಾಜು/ ಟೆಂಡರ್ ನಡೆಯುವ ಸಮಯದಲ್ಲಿ ಕಡ್ಡಾಯವಾಗಿ ಹಾಜರಿರಲು ಸೂಚಿಸಲಾಗಿದೆ.
3) ಆಡಳಿತಾಧಿಕಾರಿ, ತುಮಕೂರು ವಿಭಾಗರವರು, ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4) ನಿಲ್ದಾಣಾಧಿಕಾರಿ/ ಸಂಚಾರ ನಿಯಂತ್ರಕರು <u>ತುಮಕೂರು/ ಗುಬ್ಬಿ/ ನಿಟ್ಟೂರು/ ಸಿ.ಎಸ್.ಪುರ/ ದಾಬಸ್‌ಪೇಟೆ/ ಕೊರಟಗೆರೆ/ ಕುಣಿಗಲ್/ ಅಮೃತೂರು/ ಹೆಬ್ಬೂರು/ ಹುಲಿಯೂರುದುರ್ಗ/ ತುರುವೇಕೆರೆ/ ಚಿಕ್ಕನಾಯಕನಹಳ್ಳಿ/ ಮಧುಗಿರಿ/ ತಿಪಟೂರು/ ನೊಣವಿನಕೆರೆ</u> ಬಸ್ ನಿಲ್ದಾಣರವರ ಮಾಹಿತಿಗಾಗಿ ಹಾಗೂ ಈ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ತುಮಕೂರು ವಿಭಾಗ: ತುಮಕೂರು.

# ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ : ತುಮಕೂರು ವಿಭಾಗ : ತುಮಕೂರು

1. **ಲಗೇಜ್/ ಕ್ಲೋಕ್ ರೂಮ್ ದರಗಳು:**

2. ಸರಿಯಾಗಿ ಪ್ಯಾಕ್ ಮಾಡದ ವಸ್ತುಗಳು / ಲಾಕ್‌ಮಾಡದ ಟ್ರಂಕ್ / ಸೂಟ್ ಕೇಸ್‌ಗಳು, ಕೆಟ್ಟುಹೋಗುವ ವಸ್ತುಗಳಾದ ತರಕಾರಿ, ಮೀನು, ಮಾಂಸ, ಸ್ಫೋಟಕ ವಸ್ತುಗಳು, ಜ್ವಾಲೆ ಎಬ್ಬಿಸುವ ವಸ್ತುಗಳು, ನಿಷೇಧಿತ ವಸ್ತುಗಳು ಹಾಗೂ ಪ್ರಾಣಿಗಳಾದ ನಾಯಿ, ಮೊಲ ಇತ್ಯಾದಿಗಳನ್ನು ಕ್ಲೋಕ್ ರೂಂನಲ್ಲಿ ಪಡೆಯುವಂತಿಲ್ಲ.

3. ಕ್ಲೋಕ್ ರೂಂ / ಲಗೇಜ್ ರೂಂನ ಪರವಾನಗಿದಾರರು ಅಗತ್ಯ ದಾಖಲಾತಿಯನ್ನು ನಿರ್ವಹಿಸಿ, ವಸ್ತುಗಳನ್ನು ಠೇವಣಿ ಇಡುವವರ ವಿವರಗಳನ್ನು ದಾಖಲಿಸುವುದು. ನಿಗಮದ ಅಧಿಕಾರಿಗಳು / ಬಸ್ ನಿಲ್ದಾಣದ ಅಧಿಕಾರಿಗಳು ಕೇಳಿದಲ್ಲಿ, ಸದರಿ ದಾಖಲಾತಿಯನ್ನು ತೋರಿಸತಕ್ಕದ್ದು.

4. ಬೆಂಗಳೂರು ಹೊರತುಪಡಿಸಿ, ಇತರೆ ಬಸ್ ನಿಲ್ದಾಣಗಳಲ್ಲಿರುವ ಕ್ಲೋಕ್ ರೂಂ / ಲಗೇಜ್ ರೂಂನಲ್ಲಿ ಪರವಾನಗಿದಾರರು ಗ್ರಾಹಕರಿಂದ ಪಡೆಯಬೇಕಿರುವ ದರಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ವಿವರಗಳು | ಪ್ರಸ್ತುತ ದರ | |
|---|---|---|---|
| | | ಪ್ಯಾಕೇಜ್‌ಗೆ (ರೂ.) | ಲಾಕರ್ ವ್ಯವಸ್ಥೆಗೆ (ರೂ.) |
| 1 | 30 ಕೆ.ಜಿ.ವರೆಗೆ, 12 ಗಂಟೆಗಳ ಅವಧಿಗೆ (ಸೂಟ್‌ಕೇಸ್, ಟ್ರಂಕ್, ಹಾಸಿಗೆ ಇತ್ಯಾದಿ) | 5/- | 10/- |
| 2 | ಮುಂದಿನ 12 ಗಂಟೆಗಳು ಅಥವಾ ಭಾಗಶಃ ಅವಧಿಗೆ | 10/- | 15/- |
| 3 | ನಂತರದ ಪ್ರತಿ 12 ಗಂಟೆಗಳಿಗೆ | 15/- | 20/- |

5. ಪರವಾನಗಿದಾರರು ಠೇವಣಿ ಇರಿಸುವ ವಸ್ತುಗಳಿಗೆ ಬೆಂಕಿ ತಗುಲದಂತೆ ಅಗ್ನಿರಕ್ಷಕ ಉಪಕರಣಗಳ ವ್ಯವಸ್ಥೆ ಮಾಡಿಕೊಳ್ಳುವುದು.

6. ಕ್ಲೋಕ್ ರೂಂನಲ್ಲಿ ಠೇವಣಿ ಇಡಬಹುದಾದ / ನಿಷೇಧಿತ ವಸ್ತುಗಳು, ದರಗಳು, ವಸ್ತುಗಳ ತೂಕ ಇತ್ಯಾದಿ ವಿವರಗಳನ್ನು, ಕ್ಲೋಕ್ ರೂಂ ಮುಂದುಗಡೆ ಸಾರ್ವಜನಿಕ ಪ್ರಯಾಣಿಕರು ವೀಕ್ಷಿಸಲು ಪ್ರದರ್ಶಿಸತಕ್ಕದ್ದು.

7. ಪ್ರಯಾಣಿಕರು ಠೇವಣಿ ಇಡುವ ವಸ್ತುಗಳಿಗೆ ಪರವಾನಗಿದಾರರು ಜವಾಬ್ದಾರರಾಗಿದ್ದು, ಠೇವಣಿ ಇಡುವ ವಸ್ತುಗಳು ಕಳವು / ಹಾನಿಗೊಂಡಲ್ಲಿ, ರೂ.1,000/- ರವರೆಗೆ ಪರಿಹಾರ ನೀಡುವುದಾಗಿ ಗ್ರಾಹಕರಿಗೆ ನೀಡುವ ರಸೀದಿಯಲ್ಲಿ ಮುದ್ರಿಸುವುದು ಹಾಗೂ ಅದರಂತೆ ಕ್ರಮ ವಹಿಸುವುದು.

8. ಪರವಾನಗಿದಾರರು ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/-, 2 ನೇ ಪ್ರಕರಣಕ್ಕೆ ರೂ.1,000/- ಮತ್ತು 3 ನೇ ಪ್ರಕರಣಕ್ಕೆ ರೂ.2,000/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ ರೂ.2,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.